ಇಲ್ಲಿ ಇಲ್ಲವೆಂದು ಹೇಳಿದರೂ ಮತ್ತೆ ಅದನ್ನೇ ಕೇಳುತ್ತಿದ್ದರೆ ಹೇಗೆ?

(ಎ.ನಾರಾಯಣಸ್ವಾಮಿಯವರು ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಡಿ.ಬಿ.ಚಂದ್ರೇಗೌಡ: ಸುರೇಶ್ ಕುಮಾರ್‌ರವರೇ, ಇದನ್ನು ನೀವು ಸರಿಪಡಿಸದಿದ್ದರೆ ಖಂಡಿತಾ ಶಾಸನಸಭೆಗೆ ಗೌರವ ಬರುವುದಿಲ್ಲ.

ಅಧ್ಯಕ್ಷರು: ಮಂತ್ರಿಗಳು ಬಂದ ಮೇಲೆ ಉತ್ತರ ಕೊಡಿಸುತ್ತೇನೆ ಎಂದು ಹೇಳಿದರೂ ಅವರು ಇಲ್ಲದೇ ಇದ್ದಾಗ ಏಕೆ ಪ್ರಸ್ತಾಪ ಮಾಡಬೇಕು? ಈಗ ಮುಂದಿನ ವಿಷಯ, ಸಿಂಧ್ಯಾರವರೇ ನೀವು ಪ್ರಸ್ತಾಪ ಮಾಡಿ.

12-30 ಪಿ.ಎಂ

ಆ) ವಿಷಯ: ರಾಜ್ಯದ ಹೆದ್ದಾರಿಗಳಲ್ಲಿ ಅಪಘಾತಗಳು ಹೆಚ್ಚುತ್ತಿರುವುದು.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ ಬಹಳ ಆತಂಕಕಾರಿಯಾದಂಥ ಒಂದು ವಿಚಾರದ ಬಗ್ಗೆ ಮಾನ್ಯ ಸಾರಿಗೆ ಸಚಿವರು ಹಾಗೂ ಮಾನ್ಯ ಗೃಹ ಇಲಾಖೆಯ ಮಂತ್ರಿಗಳ ಗಮನವನ್ನು ಸೆಳೆಯಲಿಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ. ಏಕೆಂದರೆ ಇದು ಕೇವಲ ಸರ್ಕಾರಕ್ಕಷ್ಟೇ ಸಂಬಂಧಪಟ್ಟಂತಹ ವಿಚಾರವಲ್ಲ. ಕಾರಣವೇನೆಂದರೆ, ರಾಜ್ಯದಲ್ಲಿ ಕಳೆದ 2-3 ತಿಂಗಳುಗಳಲ್ಲಿ ಅಪಘಾತಗಳು ಬಹಳ ದೊಡ್ಡ ಸಂಖ್ಯೆಯಲ್ಲಿ ಆಗುತ್ತಿವೆ. ಬಿಜಾಪುರ ಜಿಲ್ಲೆಯಲ್ಲಿ ಒಂದೇ ಕುಟುಂಬಕ್ಕೆ ಸೇರಿದ ಸುಮಾರು 13 ಜನರು ಸತ್ತು ಹೋಗಿದ್ದಾರೆ. ಇವತ್ತು ನಮ್ಮ ರಾಜ್ಯದ ಪ್ರಮುಖ ದಿನಪತ್ರಿಕೆಯಾದ ಪ್ರಜಾವಾಣಿಯಲ್ಲಿ ಬಂದಿರುವಂಥ ಆ ಧಾರುಣವಾದ ದೃಶ್ಯವನ್ನು ನೋಡಿದರೆ ಎಂಥವರ ಮನಸ್ಸು ಸಹ ಕರಗುತ್ತದೆ. ಹೀಗೆ ದಿನಕ್ಕೊಂದರಂತೆ ಅಪಘಾತವಾಗಿ ಹತ್ತಾರು ಸಾವುಗಳು ಆಗುತ್ತಿವೆ. ನನಗೆ ತಿಳುವಳಿಕೆ ಇರುವ ಹಾಗೆ ನಮ್ಮ ರಾಜ್ಯದಲ್ಲಿ ಪ್ರತೀ ವರ್ಷ ಸುಮಾರು ಮೂರರಿಂದ ಮೂರೂವರೆ ಸಾವಿರ ಜನರು ಅಪಘಾತಗಳಲ್ಲಿ ಸಾಯುತ್ತಾರೆ. ಆದರೆ ಕಳೆದ 2-3 ತಿಂಗಳುಗಳಲ್ಲಿ ಅಪಘಾತಗಳು ಏಕೆ ಹೆಚ್ಚಾಗುತ್ತಿವೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಸಾಮಾನ್ಯವಾಗಿ ಮಳೆಗಾಲ ಪ್ರಾರಂಭವಾಗಿ ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಜಡಿಮಳೆ ಇರುವುದರಿಂದ ಇಂಥ ಸಂದರ್ಭಗಳಲ್ಲಿ ಅಪಘಾತಗಳು ಹೆಚ್ಚಾಗುತ್ತವೆ. ದಿನಕ್ಕೆ 10 ರಿಂದ 15 ಜನ ಅಪಘಾತಗಳಲ್ಲಿ ಸಾಯುತ್ತಾರೆಂದರೆ ಈ ತಿಂಗಳುಗಳಲ್ಲಿ ಏನೇನು ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಶ್ರೀ ದಿನಕರ್ ಅವರು ಡಿ.ಐ.ಜಿ. ಆಗಿದ್ದಂಥ ಸಂದರ್ಭದಲ್ಲಿ ಒಂದು ರಿಪೋರ್ಟ್‌ನ್ನು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ್ದಾರೆ. ಇನ್ನು ಮ್ಯಾಕ್ಸಿಕ್ಯಾಬ್ ಮತ್ತು ಟೆಂಪೋಗಳಿಗೆ 10 ರಿಂದ 15 ಜನರನ್ನು

ಮಾತ್ರ ತುಂಬಿಕೊಂಡು ಹೋಗುವುದಕ್ಕೆ ಪರ್ಮಿಷನ್ ಕೊಟ್ಟಿರತಕ್ಕಂಥಾದ್ದು. ಆದರೆ ಅವರು ಆದರಲ್ಲಿ 40 ರಿಂದ 50 ಜನರನ್ನು ತುಂಬಿಸಿ ಕೊಂಡು 80 ರಿಂದ 120 ಕಿ.ಮೀ. ವೇಗದಲ್ಲಿ ಹೋಗುತ್ತಿರುತ್ತಾರೆ ಮತ್ತು ಡ್ರಂಕನ್ ಡ್ರೈವಿಂಗ್, ಓವರ್ ಲೋಡಿಂಗ್ ಮತ್ತು ಇಲ್ಲೀಗಲ್ ಆಗಿ ವೆಹಿಕಲ್ಸ್ ಆಪರೇಷನ್ಸ್ ಮಾಡುತ್ತಿರುವವರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವಂಥಾದ್ದು ಆಗಬೇಕು. ರಾಜ್ಯದಲ್ಲಿ ಸ್ಟೇಟ್ ಲೆವೆಲ್ ರೋಡ್ ಸೇಫ್ಟಿ ಕಮಿಟಿ ಎನ್ನುವಂಥ ಒಂದು ಕಮಿಟಿ ಇದೆ. ಈ ಕಮಿಟಿಗೆ ಸನ್ಮಾನ್ಯ ಗೃಹ ಮಂತ್ರಿಗಳು ಅಧ್ಯಕ್ಷರು ಮತ್ತು ಮಾನ್ಯ ಸಾರಿಗೆ ಮಂತ್ರಿಗಳು ಉಪಾಧ್ಯಕ್ಷರು ಹಾಗೂ ಸದಸ್ಯರಾಗುತ್ತಾರೆ. ಮತ್ತು ಜಿಲ್ಲಾ ಮಟ್ಟದಲ್ಲಿ ಸಹಿತ ಡೆಪ್ಯುಟಿಕಮಿಷನರ್‌ಗಳ ಅಧ್ಯಕ್ಷತೆಯಲ್ಲಿ ಹಾಗೂ ಎಸ್.ಪಿ.ಗಳ ಉಪಾಧ್ಯಕ್ಷತೆಯಲ್ಲಿ ಒಂದು ರೋಡ್ ಸೇಫ್ಟಿ ಕಮಿಟಿ ಎಂದು ಇದೆ. ಇದಕ್ಕೆ 50 ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳವರೆಗೆ ಹಣ ಕೊಟ್ಟು ಎಲ್ಲೆಲ್ಲಿ ಅಪಘಾತಗಳು ಆಗುವಂಥ ಕ್ರಿಟಿಕಲ್ ಪ್ಲೇಸಸ್ ಎಂದು ಐಡೆಂಟಿಫೈ ಮಾಡಿದ್ದಾರೆ ಅದನ್ನು ಹೋಗಲಾಡಿಸಲಿಕ್ಕೆ ಲೋಕೋಪಯೋಗಿ ಇಲಾಖೆಯವರ ಜೊತೆ ಕೋಆರ್ಡಿನೇಷನ್ ಮಾಡಿ ಕ್ರಮ ತೆಗೆದುಕೊಳ್ಳಬೇಕು ಎನ್ನುವಂಥಾದ್ದು ಇದೆ. ಆದರೆ ದುರಾದೃಷ್ಟವಶಾತ್ ಕಳೆದ ಒಂದೂವರೆ ವರ್ಷದಲ್ಲಿ ರೋಡ್ ಸೇಫ್ಟಿ ಕಮಿಟಿ ಮೀಟಿಂಗ್‌ನ್ನು ಡೆಪ್ಯುಟಿ ಕಮಿಷನರ್ಸ್ ಮಾಡಿಲ್ಲ. ಹಾಗೆಯೇ ಮುಖ್ಯಮಂತ್ರಿಗಳಾಗಲೀ ಅಥವಾ ಗೃಹಮಂತ್ರಿಗಳಾಗಲಿ ಸ್ಟೇಟ್ ಲೆವೆಲ್ ರೋಡ್ ಸೇಫ್ಟಿ ಕಮಿಟಿ ಮೀಟಿಂಗ್‌ನ್ನು ಸಹಿತ ಇದುವರೆಗೆ ಮಾಡಿಲ್ಲ. ಮತ್ತು ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್ ಏನು ಮಾಡುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮರ್ಡರ್‌ಗಳಿಂದಾಗಿ ರಾಜ್ಯದಲ್ಲಿ ವರ್ಷಕ್ಕೆ ಒಂದು ಸಾವಿರ ಜನ ಸಾಯುತ್ತಿದ್ದಾರೆ. ಅಸ್ವಾಭಾವಿಕ ಮರಣ ಹೊಂದತಕ್ಕಂಥವರು ಬೆಂಗಳೂರಿನಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳು ವರ್ಷಕ್ಕೆ ಸುಮಾರು ಒಂದರಿಂದ ಒಂದೂವರೆ ಸಾವಿರ ಸಾಯುತ್ತಾರೆ. ನಾವು ಅಪಘಾತಗಳ ಬಗ್ಗೆ ಹಿಂದಿನ ವರ್ಷಗಳ ಅಂಕಿಸಂಖ್ಯೆಯನ್ನು ನೋಡಿದಾಗ ಸತ್ತವರ ಸಂಖ್ಯೆ 2-3 ಸಾವಿರ ಇತ್ತು. ಈ ವರ್ಷ ಈಗಾಗಲೇ ಅಪಘಾತದಲ್ಲಿ ಸತ್ತವರ ಸಂಖ್ಯೆ ನಾಲ್ಕೈದು ಸಾವಿರ ದಾಟಿದೆ. ಇದು ಬಹಳ ಆತಂಕಕಾರಿಯಾಗಿರತಕ್ಕಂಥ ವಿಚಾರ. ಸರ್ಕಾರ ಕೂಡಲೇ ರೋಡ್ ಸೇಫ್ಟಿ ಕಮಿಟಿ ಮೀಟಿಂಗ್‌ನ್ನು ಕರೆಯಬೇಕು. ಡಿ.ಜಿ.ಪಿ. ಅವರನ್ನು ಕರೆಸಬೇಕು. ಗೃಹ ಇಲಾಖೆಯಲ್ಲಿ ಟ್ರಾಫಿಕ್ ಸೆಕ್ಷನ್ ಇದೆ, ಅವರಿಗೆ ಬೇಕಾಗಿರತಕ್ಕಂಥ ಸೌಲಭ್ಯಗಳನ್ನು ಕೊಡಬೇಕು. ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿರತಕ್ಕಂಥ ಎಕ್ವಿಪ್‌ಮೆಂಟ್ಸ್ ಏನೇನು ಇವೆ ಅವು ಕೆಲಸ ಮಾಡುತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನನಗೆ ತಿಳಿದು ಬಂದ ಮಾಹಿತಿ ಪ್ರಕಾರ ಟ್ರಾಫಿಕ್ ವೆಹಿಕಲ್ಸ್‌ನ ಡೀಸಲ್ ಪೆಟ್ರೋಲ್‌ಗೆ ಸಹಿತ ಹಣ ರಿಲೀಸ್ ಆಗಿಲ್ಲ. ಇದರಿಂದ ಬಹಳ ತೊಂದರೆಯಾಗಿದೆ. ದಯವಿಟ್ಟು ಇದರ ಬಗ್ಗೆ ರೋಡ್ ಸೇಫ್ಟಿ ಕಮಿಟಿ ಆಗಬೇಕು. ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನವರು ಏನು

ಮಾಡುತ್ತಿದ್ದಾರೆ? ಟ್ರಾನ್ಸ್‌ಪೋರ್ಟ್ ಕಮಿಷನರ್‌ರವರು ಏನು ಮಾಡುತ್ತದ್ದಾರೆ? ಎನ್ನುವುದು ಸಹ ಗೊತ್ತಾಗಬೇಕು. ಅಪಘಾತಗಳನ್ನು ತಡೆಗಟ್ಟಲಿಕ್ಕೆ ಸರ್ಕಾರದಿಂದ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದೂ ಸಹ ಗೊತ್ತಾಗಬೇಕು ಇದರ ಬಗ್ಗೆ ತುರ್ತಾಗಿ ಗಮನಹರಿಸಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಆರ್.ಸಗೀರ್ ಅಹಮ್ಮದ್ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ನಾಳೆಯ ದಿವಸ ಒಂದು ಹೇಳಿಕೆಯನ್ನು ಕೊಡುತ್ತೇನೆ.

ಅಧ್ಯಕ್ಷರು ಶ್ರೀ ಸಿಂಧ್ಯಾರವರೆ, ಸಂಬಂಧಪಟ್ಟ ಮಂತ್ರಿಗಳು ಕೆಲವು ಮಾಹಿತಿಗಳನ್ನು ಸಂಗ್ರಹಿಸಿ ನಾಳೆ ಉತ್ತರ ಕೊಡುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಆಗಬಹುದು.